ತಂತಿ ವಿಳಾಸ: ಯೂನಿರೆಜ್
ದೂರವಾಣಿ ಸಂಖ್ಯೆ: 2419677/2419361

e-mail: registrar@uni-mysore.ac.in
www.uni-mysore.ac.in

# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ:1916

(ನ್ಯಾಕ್ ಸಂಸ್ಥೆಯ ಮರು ಮಾನ್ಯತೆಯಲ್ಲಿ 'ಎ' ಗ್ರೇಡ್ ಪಡೆದಿದೆ)

(ಎನ್.ಐ.ಆರ್.ಎಫ್.-2024: ರಾಜ್ಯ ಸಾರ್ವಜನಿಕ ವಿಶ್ವವಿದ್ಯಾನಿಲಯ ವರ್ಗದಲ್ಲಿ 19ನೇ ಸ್ಥಾನ, ವಿಶ್ವವಿದ್ಯಾನಿಲಯ ವರ್ಗದಲ್ಲಿ 54ನೇ ಸ್ಥಾನ ಮತ್ತು ಒಟ್ಟಾರೆ ವರ್ಗದಲ್ಲಿ 86ನೇ ಸ್ಥಾನ)

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್‌ಭವನ, ಮೈಸೂರು

ಸಂಖ್ಯೆ:ಜಿಎಲ್5/70/2025-26

ದಿನಾಂಕ:04-12-2025

## ಸು ತ್ತೋ ಲೆ

ವಿಷಯ: **"ಗಂಗೋತ್ರಿ ಇಕೋ ವಾರಿಯರ್ಸ್ ಕ್ಲಬ್"**ಗೆ ಪ್ರತಿನಿಧಿಗಳನ್ನು ನಿಯೋಜಿಸುವ ಬಗ್ಗೆ

ಉಲ್ಲೇಖ: ಅಧ್ಯಕ್ಷರು, ಸಮಾಜಕಾರ್ಯ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರ ಪತ್ರ ಸಂಖ್ಯೆ:PGMSW/503/2025-26, ದಿನಾಂಕ: 04.11.2025

*****

ಮೈಸೂರು ವಿಶ್ವವಿದ್ಯಾನಿಲಯವು ನಾಡಿನ ಶ್ರೇಷ್ಠ ಶಿಕ್ಷಣ ಸಂಸ್ಥೆಗಳಲ್ಲಿ ಒಂದಾಗಿ ತನ್ನ ಶೈಕ್ಷಣಿಕ ಶ್ರೇಷ್ಠತೆ, ಸಾಂಸ್ಕೃತಿಕ ಪರಂಪರೆ ಮತ್ತು ಪ್ರಕೃತಿಕ ಸೌಂದರ್ಯದ ಮೂಲಕ ಹೆಸರುವಾಸಿಯಾಗಿದೆ. ಇಂತಹ ಹಸಿರು ಹಾಗೂ ಚೇತನಭರಿತ ಆವರಣದ ಸಂರಕ್ಷಣೆ ನಮ್ಮೆಲ್ಲರ ಸಾಮಾಜಿಕ ಮತ್ತು ನೈತಿಕ ಹೊಣೆಗಾರಿಕೆಯಾಗಿದೆ ಎಂಬ ಅರಿವಿನಿಂದ, ಸಮಾಜ ಕಾರ್ಯ ಅಧ್ಯಯನ ವಿಭಾಗದ ನೇತೃತ್ವದಲ್ಲಿ **"ಗಂಗೋತ್ರಿ ಇಕೋ ವಾರಿಯರ್ಸ್ ಕ್ಲಬ್"**ನ್ನು ಸ್ಥಾಪಿಸಲಾಗುತ್ತದೆ. ಆದ್ದರಿಂದ ವಿಶ್ವವಿದ್ಯಾನಿಲಯದ ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಅಧ್ಯಕ್ಷರು /ನಿರ್ದೇಶಕರು / ಸಂಯೋಜಕರುಗಳ ಗಮನಕ್ಕೆ ತರುತ್ತಾ, ಉಲ್ಲೇಖಿತ ಪತದನ್ವಯ **"ಗಂಗೋತ್ರಿ ಇಕೋ ವಾರಿಯರ್ಸ್ ಕ್ಲಬ್"**ಗೆ ಪ್ರತಿಯೊಂದು ವಿಭಾಗದಿಂದ ಇಬ್ಬರು ವಿದ್ಯಾರ್ಥಿಗಳನ್ನು ಗಂಗೋತ್ರಿ ಇಕೋ ವಾರಿಯರ್ಸ್ ಕ್ಲಬ್ ಪ್ರತಿನಿಧಿಗಳಾಗಿ ನೇಮಕ ಮಾಡಲು (ಪ್ರಥಮ ವರ್ಷದಿಂದ ಒಬ್ಬ ವಿದ್ಯಾರ್ಥಿ ಹಾಗೂ ದ್ವಿತೀಯ ವರ್ಷದಿಂದ ಒಬ್ಬ ವಿದ್ಯಾರ್ಥಿ) ಜೊತೆಗೆ ಈ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಹಾಗೂ ಮೇಲ್ವಿಚಾರಣೆ ಮಾಡಲು ಪ್ರತಿ ವಿಭಾಗದಲ್ಲಿ ಒಬ್ಬ ಅಧ್ಯಾಪಕರನ್ನು / ಅಧ್ಯಾಪಕೇತರರನ್ನು ಸಂಯೋಜಕರನ್ನಾಗಿ ನೇಮಿಸಲು ಒಳಗೊಂಡಂತೆ ಸದರಿ ಕ್ಲಬ್‌ನ ಸ್ವಚ್ಛತೆ ಮತ್ತು ಪರಿಸರ ಸ್ನೇಹಿ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಹಾಗೂ ಆಯಾ ವಿಭಾಗದ ಸಂಪೂರ್ಣ ಸ್ವಚ್ಛತೆಯ ಜವಾಬ್ದಾರಿಯನ್ನು ತೆಗೆದುಕೊಳ್ಳಲು ತಮ್ಮ ವಿಭಾಗದಿಂದ ಹೆಸರು ಸೂಚಿಸಲು ಈ ಮೂಲಕ ತಿಳಿಸಲಾಗಿದೆ.

**ಕುಲಸಚಿವರಿಂದ ಕರಡು ಅನುಮೋದಿಸಿದೆ**.

Chandrakeshava 4/12
ಉಪ ಕುಲಸಚಿವ(ಸಾಮಾನ್ಯ)
ಆಡಳಿತ
ಮೈ.ವಿ.ವಿ. ಮೈಸೂರು

ಇವರಿಗೆ:

1. ಅಧ್ಯಕ್ಷರು /ನಿರ್ದೇಶಕರು / ಸಂಯೋಜಕರುಗಳು, ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು
2. ಸಿಸ್ಟಮ್-ಕೋರ್ಡಿನೇಟರ್, ಮಾಹಿತಿ ಮತ್ತು ಸಂವಹನ(ಐಸಿಡಿ), ಗಣಕವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ- ವಿಭಾಗದಿಂದ ಬರುವ ಮಾಹಿತಿಗಳನ್ನು ವೆಬ್‌ಸೆಟ್‌ನಲ್ಲಿ ಪ್ರಕಟಿಸುವಂತೆ ಕೋರಿದೆ
3. ಅಧ್ಯಕ್ಷರು, ಸಮಾಜಕಾರ್ಯ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು
4. ಮಾನ್ಯ ಕುಲಪತಿ /ಕುಲಸಚಿವರ ಆಪ್ತಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
5. ಕಛೇರಿ ಪ್ರತಿ.